**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**
**ಸಿ. ಸಿ. ನಂ:49/2022**

ಸಿಡಬ್ಲ್ಯು: 2
ಪಿಡಬ್ಲ್ಯು: 1

| | | |
|---|---|---|
| ಸಾಕ್ಷಿಯ ಹೆಸರು | : | ಚೊಂಡ |
| ತಂದೆಯ ಹೆಸರು | : | ಸೋಮ |
| ವಯಸ್ಸು | : | 50 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸಸ್ಥಳ | : | ಅಮ್ಮತ್ತಿ ಗ್ರಾಮ |

**ದಿನಾಂಕ: 19.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀಮತಿ ಸರ್ಕಾರಿ ಅಭಿಯೋಜಕರಿಂದ**

1. ನನಗೆ ಆರೋಪಿ ಪರಿಚಯ ಇದೆ. ಅಮ್ಮಡ ರಾಣಿ ಮಂದಣ್ಣ ಹೇಗೆ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಅಪಘಾತ ನಡೆದಿಲ್ಲ. ಸಾಕ್ಷಿಯು ಮಹಜರನ್ನು ನೋಡಿ ಅದರಲ್ಲಿರುವ ತನ್ನ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಮಹಜರು ನಿಪಿ-1 ಎಂದು ಗುರುತಿಸಿ, ಹೆಬ್ಬಟ್ಟಿನ ಗುರುತು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಂದೆ ಪೋಲಿಸರು ಯಾವುದೇ ವಾಹನವನ್ನು ವಶಕ್ಕೆ ಪಡೆದಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**ಮುಖ್ಯ ವಿಚಾರಣೆ : ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು : ಸರ್ಕಾರಿ ಅಭಿಯೋಜಕರಿಂದ**

1. ದಿ:10.12.2021 ರಂದು ನಾನು ಆರೋಪಿಯೊಂದಿಗೆ ಅವರ ಹಸುಗಳಿಗೆ ಹುಲ್ಲು ತರಲು ಅವರ ವಾಹನ ಕೆಎ-12-ಎ-6462 ಗೂಡ್ಸ್ ವಾಹನದಲ್ಲಿ ಪಾಲಿಬೆಟ್ಟ ತೋಟಕ್ಕೆ ಹೋಗಿ ವಾಪಸ್ಸು ಸಂಜೆ 5.30 ಗಂಟೆಗೆ ಮುಕಾಟಿ ಕೊಪ್ಪ ರಸ್ತೆಗೆ ತಲುಪಿದಾಗ ಆರೋಪಿಯವರು ಸದರಿ ವಾಹನವನ್ನು ನೇರವಾಗಿ ಮನೆಗೆ ತೆಗೆದುಕೊಂಡು ಹೋದರೆ ಮನೆಯ ಬಳಿ ತಿರುಗಿಸಲು ಸಾಧ್ಯವಿಲ್ಲ ಎಂದು ಹಿಮ್ಮುಖವಾಗಿ

ಹೋಗುವ ಎಂದು ಹೇಳಿ ವಾಹನವನ್ನು ಸದರಿ ರಸ್ತೆಯಲ್ಲಿ ಹಿಮ್ಮುಖವಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯಲ್ಲಿ ನಿಂತಿದ್ದ, ಶ್ರೀಮತಿ ಅಮ್ಮಡ ರಾಣಿ ಮಂದಣ್ಣ ಅವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರು ನೆಲಕೆ ಕಬಿದ್ದಾಗ ಸದರಿ ವಾಹನದ ಚಕ್ರವು ಅವರ ಬಲಗಾಲಿನ ಮೇಲೆ ಹತ್ತಿದ್ದರಿಂದ ಮಂಡಿಯ ಬಳಿ ಮೂಳೆ ಮುರಿದು ತೀವ್ರವಾಗಿ ಗಾಯವಾಗಿದ್ದಲ್ಲದೆ ಎಡಗೈನ ಮಣಿಗಂಟಿನ ಬಳಿ ತೀವ್ರವಾದ ರಕ್ತಗಾಯವಾಗಿರುತ್ತದೆ ಮತ್ತು ಎಡಭಾಗದ ಪಕ್ಕೆಯಲ್ಲಿ ಮುರಿದು ತೀವ್ರಗಾಯ ವಾಗಿದ್ದಲ್ಲದೆ ಶರೀರಕ್ಕೆ ಗಾಯ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಸದರಿಯವರನ್ನು ಚಿಕಿತ್ಸೆಯ ಸಲುವಾಗಿ ಆಸ್ಪತ್ರೆಗೆ ಸಾಗಿಸುವಾಗ ಅವರು ಮಾರ್ಗಮಧ್ಯ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ12.12.2021 ರಂದು ಕೃತ್ಯ ಸ್ಥಳಕ್ಕೆ ಪೋಲಿಸರು ಬಂದಾಗ ನಾನು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿದ್ದು, ಸದರಿ ಸ್ಥಳದಲ್ಲಿ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಕೃತ್ಯದ ವಾಹನವನ್ನು ಆರೋಪಿಯವರ ವಾಸದ ಮನೆಯ ಬಳಿ ನಿಲ್ಲಿಸಿದ್ದನ್ನು ನಾನು ಗುರುತಿಸಿ ತೋರಿಸಿಕೊವಾಟ್ಟದ್ದು ಸ್ಥಳದಲ್ಲಿ ಪೋಲಿಪಿಸರುವ ಮಹಜರು ಬರೆದು ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ. ಸದರಿ ಸಮಯದಲ್ಲಿ ಹಾಜರಿದ್ದು, ಮಹಜರಿಗೆ ನಾನು ಹೆಬ್ಬೆಟ್ಟಿನನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ಕಂಡಿದ್ದರು ಸಹ ನೋಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ. ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ